

ಬಿಸಿಲು
ಬೆಳದಿಂಗಳು
ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಒಬ್ಬನನ್ನೇ ಪ್ರೀತಿಸಿದ ಇಬ್ಬರು ಸೋದರಿಯರು

'ಅಮ್ಮಾ, ಬಾ ಇಲ್ಲಿ!' ಉಪ್ಪರಿಗೆಯ ಕೊಠಡಿಯಿಂದ ಕಿಟಕಿಯಾಚೆ ನೋಡುತ್ತಿದ್ದ ನಾಲ್ಕು ವರ್ಷದ ಮಗಳು ತನ್ನ ತಾಯಿಯನ್ನು ಕೂಗಿ ಕರೆದಳು.

'ಏನೇ ಅದು, ಯಾರೆ?' ಕನ್ನಡಿಯ ಮುಂದೆ ನಿಂತು ಅಲಂಕಾರ ಮಾಡಿಕೊಳ್ಳುತ್ತಿದ್ದ ತಾಯಿ ವಿಮನಸ್ಕಳಾಗಿ ಕೇಳಿದಳು.

'ಬೇಗ ಬಾರಮ್ಮಾ, ಬಾ' ಎಂದು ಮಗಳು ಮತ್ತೊಮ್ಮೆ ಜೋರಾಗಿ ಕೂಗಿ ಕರೆದಳು.

'ಹುಚ್ಚು ಹುಡುಗಿ, ಏನೇ ಅದು?' ತಾಯಿ ತಲೆಗೂದಲನ್ನು ಬಾಚಿಕೊಳ್ಳುತ್ತಾ ಉದಾಸೀನ ತೋರಿದಳು.

ಬಾಲಕಿ ತಟ್ಟನೆ ಓಡಿ ಬಂದು ತಾಯಿಯ ಕೈಯನ್ನು ಹಿಡಿದು 'ಬಾ' ಎಂದು ಒತ್ತಾಯಪಡಿಸಿದಳು. ಮುದ್ದು ಮಗಳ ಒತ್ತಾಯಕ್ಕೆ ಮಣಿದು ತಾಯಿ ಕಿಟಕಿ ಹತ್ತಿರ ಹೋಗಿ ನೋಡಿದಳು. ನಗರದ ಬೀದಿಯಲ್ಲಿ ಮೆರವಣಿಗೆ ಹೋಗುತ್ತಿತ್ತು. ಮುಂದೆ ಬ್ಯಾಂಡು ಭಜಂತ್ರಿ ಶಹನಾಯಿ. ಅದರ ಹಿಂದೆ ಒಳ್ಳೊಳ್ಳೆ ಉಡುಗೆ-ತೊಡುಗೆ ತೊಟ್ಟಿದ್ದ ನೂರಾರು ಜನರು. ಅವರ ಹಿಂದೆ ಒಂದು ಕುದುರೆ. ಅದರ ಮೇಲೊಬ್ಬ ಸವಾರಿ. ಮುಡಿಯಿಂದ ಮೊಣಕೈವರೆಗೆ ಇಳಿಬಿದ್ದಿದ್ದ ಹೂಮಾಲೆಗಳಿಂದ ಅವನ ಮುಖ ಮರೆಯಾಗಿತ್ತು.

'ಮದುವೆ ದಿಬ್ಬಣ ಕಣೆ ಅದು' ಎಂದಳು ತಾಯಿ. ಮಗಳಿಗೆ ಅರ್ಥವಾಗಲಿಲ್ಲ. ಮದುವಣಿಗನನ್ನು ಮದುವೆ ಮನೆಗೆ ಕರೆದುಕೊಂಡು ಹೋಗುತ್ತಿದ್ದಾರೆಂದು ತಿಳಿಹೇಳಿದಳು.

'ಮದುವೆ ಎಂದರೇನು?' ಮತ್ತೆ ಮಗಳ ಮುಗ್ಧ ಪ್ರಶ್ನೆ. ತಾಯಿ ತಬ್ಬಿಬ್ಬಾದಳು.

'ಮದುವೆಯಾದ ಮೇಲೆ ಹುಡುಗಿ ವರನ ಮನೆಗೆ ಹೋಗುತ್ತಾಳೆ. ನಾನು ನಿನ್ನ ತಂದೆಯ ಮನೆಗೆ ಹೇಗೆ ಬಂದಿದ್ದೇನೋ ಹಾಗೆ' ಎಂದು ತಾಯಿ ತೇಲಿಸಿ ಉತ್ತರ ಕೊಟ್ಟಳು.

'ನಾನೂ ಹುಡುಗಿ, ಹಾಗಾದರೆ ನನ್ನ ವರ ಯಾರು?' ಮಗಳು ಮುಗ್ಧತೆಯಿಂದ ಮತ್ತೆ ಕೇಳಿದಳು. ಮಗಳ ಈ ಪ್ರಶ್ನೆಗೆ ಏನು ಉತ್ತರ ಕೊಡಬೇಕೆಂದು ತೋಚದೆ ತಾಯಿ ತಡವರಿಸಿದಳು. ಮಗಳು ಪೀಡಿಸತೊಡಗಿದಳು. ಅವಳ ಕೈಯಲ್ಲಿ ಒಂದು ಸುಂದರವಾದ ಕೃಷ್ಣನ ವಿಗ್ರಹವಿತ್ತು. ಅದನ್ನು ನೋಡಿ ನಸುನಗುತ್ತಾ ಅವನೇ ನಿನ್ನ ವರ ಎಂದಳು ತಾಯಿ.

ಆ ಮುಗ್ಧ ಬಾಲಕಿ ಬೇರೆ ಯಾರೂ ಅಲ್ಲ. ರಾಜಾಸ್ತಾನದ ಮಧ್ಯಕಾಲೀನ ಭಕ್ತಿಪಂಥದಲ್ಲಿ ಆಸ್ತಿಕರಿಗೆ ರಾಧೆಯ ಅಪರಾವತಾರಳೆನಿಸಿದ ಮೀರಾಬಾಯಿ. ಆಧುನಿಕ ಭಾರತದಲ್ಲಿ ತಂದೆತಾಯಂದಿರು ತಮ್ಮ ಹೆಣ್ಣುಮಕ್ಕಳಿಗೆ ಈಗಲೂ ಪ್ರೀತಿಯಿಂದ ಇಡಲು ಇಷ್ಟಪಡುವ ಹೆಸರು 'ಮೀರಾ'. ಭಾರತದ ಧಾರ್ಮಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಮಕ್ಕಳಿಗೆ ಇಡುತ್ತಿದ್ದ ಅದೆಷ್ಟೋ ಅರ್ಥಪೂರ್ಣ ಹೆಸರುಗಳು ಆಧುನಿಕತೆಯ ಬೆಡಗುಬಿನ್ನಾಣಗಳಲ್ಲಿ ಕಣ್ಮರೆಯಾಗಿದ್ದರೂ (outdated) ಮೀರಾಳ ಹೆಸರು ಮಾತ್ರ ಈಗಲೂ ನಿತ್ಯ ವಿನೂತನವಾಗಿದೆ.

ಮೀರಾ ಹುಟ್ಟಿದ್ದು ಕ್ರಿ.ಶ. 1504 ರಲ್ಲಿ, ರಾಠೋಡ್ ರಾಜವಂಶದಲ್ಲಿ, ಮೇಡತಾ ಸಮೀಪದಲ್ಲಿರುವ ಕುಡಕೀ ಎಂಬ ಗ್ರಾಮದಲ್ಲಿ. ಬಾಲ್ಯದಲ್ಲಿಯೇ ಆಕೆಯ ತಂದೆ (ರತನ್ ಸಿಂಹ್) ತಾಯಿ (ಕುಸುಮ್ ಕುಂವರ್) ತೀರಿಕೊಂಡರು. ಅವರ ಮರಣಾನಂತರ ಮೀರಾ ಅಜ್ಜನಾದ ರಾವ್ ದೂದಾ ಆಶ್ರಯದಲ್ಲಿ ಬೆಳೆದಳು. ರಾವ್ ದೂದಾ ಅಜ್ಮೀರ್ ಮತ್ತು ಜೋಧ್‌ಪುರ್ ಮಧ್ಯಭಾಗದಲ್ಲಿರುವ ಮೇಡತಾ ಎಂಬ ಒಂದು ಚಿಕ್ಕ ಪ್ರಾಂತ್ಯದ ದೊರೆಯಾಗಿದ್ದು ತುಂಬಾ ಧಾರ್ಮಿಕ ಪ್ರವೃತ್ತಿಯುಳ್ಳವನಾಗಿದ್ದನು. ಬಾಲಕಿ ಮೀರಾಳ ಕೈಯಲ್ಲಿದ್ದ ಶ್ರೀಕೃಷ್ಣನ ವಿಗ್ರಹದ ಕಥೆ ಹೀಗಿದೆ. ಅರಮನೆಗೆ ಅನೇಕ ಸಾಧು-ಸತ್ಪುರುಷರು ಬರುತ್ತಿದ್ದರು. ಅರಮನೆಯಲ್ಲಿ ಭಾಗವತ ಮತ್ತಿತರ ಪುರಾಣ ಪುಣ್ಯಗ್ರಂಥಗಳ ಪಾರಾಯಣ ನಡೆಯುತ್ತಿದ್ದು ರಾಜಪರಿವಾರದಲ್ಲಿ ಧಾರ್ಮಿಕತೆ ಮೈಗೂಡಿತ್ತು. ಸಹಜವಾಗಿ ಮೀರಾಳ ಹೃದಯದಲ್ಲಿ ಆಧ್ಯಾತ್ಮಿಕ ಭಾವನೆ ಚಿಗುರೊಡೆಯಿತು. ಒಮ್ಮೆ ಅರಮನೆಗೆ ಬಂದಿದ್ದ ಒಬ್ಬ ಸಾಧುವಿನ ಕೈಯಲ್ಲಿ ಒಂದು ಸುಂದರವಾದ ಹಾಗೂ ತುಂಬಾ ಆಕರ್ಷಕವಾದ ಕೃಷ್ಣನ ವಿಗ್ರಹವಿತ್ತು. ಅದನ್ನು ನೋಡಿದ ಬಾಲಕಿ ಮೀರಾ ತನಗೆ ಬೇಕೆಂದು ಹಠ ಮಾಡತೊಡಗಿದಳು. ಆ ಸಾಧು ತಾನು ಆರಾಧಿಸಿಕೊಂಡು ಬಂದಿದ್ದ ಕೃಷ್ಣನ ವಿಗ್ರಹವನ್ನು ಕೊಡಲು ಮನಸ್ಸಿಲ್ಲದಿದ್ದರೂ ಮಗುವಿನ ಮನಸ್ಸನ್ನು ನೋಯಿಸಬಾರದೆಂದು ಮೀರಾಳಿಗೆ ಕೊಟ್ಟು ಆಶೀರ್ವದಿಸಿ ಮುಂದೆ ಸಾಗಿದನು. ಮೀರಾ ಖುಷಿಯಿಂದ ಕೃಷ್ಣನ ವಿಗ್ರಹವನ್ನು ಸದಾ ತನ್ನ ಕೈಯಲ್ಲಿಟ್ಟುಕೊಂಡು ಕುಣಿದು ಕುಪ್ಪಳಿಸಿ ಆಟವಾಡತೊಡಗಿದಳು. ಅದಕ್ಕೆ ನಿತ್ಯವೂ ಸ್ನಾನಮಾಡಿಸುವುದು, ಬಟ್ಟೆ ತೊಡಿಸುವುದು, ಅದರ ಮುಂದೆ ಹಾಡುವುದು, ನರ್ತಿಸುವುದು ಆಕೆಯ ನಿತ್ಯ ದಿನಚರಿಯಾಯಿತು. ಈಗಿನ ಮಕ್ಕಳು ಬೊಂಬೆಗಳನ್ನಿಟ್ಟುಕೊಂಡು ಮಲಗುವಂತೆ ಆಕೆಯು ಶ್ರೀಕೃಷ್ಣನ ವಿಗ್ರಹವನ್ನು ತನ್ನ ಹತ್ತಿರ ಇಟ್ಟುಕೊಂಡು ಮಲಗುತ್ತಿದ್ದಳು.

ಕಾಲಗತಿಸಿದಂತೆ ಮೀರಾ ಸುಂದರ ಯುವತಿಯಾಗಿ ರೂಪುಗೊಂಡಳು. ಸಂಗೀತ ಮತ್ತು ನೃತ್ಯವನ್ನು ಚೆನ್ನಾಗಿ ಬಲ್ಲವಳಾಗಿದ್ದಳು. ಆಕೆಯ ಸೌಂದರ್ಯ ಮತ್ತು ಕಂಠಮಾಧುರ್ಯ ರಾಜ್ಯದಲ್ಲಿ ಮನೆಮಾತಾಗಿತ್ತು. ಮೇವಾಡದ ರಾಜನಾದ ರಾಣಾ ಸಂಗ್ರಾಮ ಸಿಂಹ ತನ್ನ ಮಗ ಭೋಜರಾಜನಿಗೆ ಆಕೆಯನ್ನು ತಂದುಕೊಳ್ಳಬೇಕೆಂಬ ಮನಸ್ಸಾಯಿತು.

ರಾವ್ ದೂದಾ ತನ್ನ ಮೊಮ್ಮಗಳನ್ನು ಕೊಡಲು ಒಪ್ಪಿದನು. ಈ ವಿಷಯ ತಿಳಿದ ಮೀರಾ ಸಂದಿಗ್ಧತೆಗೆ ಒಳಗಾದಳು. ಬಾಲ್ಯದಿಂದಲೂ ಕೃಷ್ಣನನ್ನೇ ತನ್ನ ಪತಿಯೆಂದು ನಂಬಿಕೊಂಡು ಬಂದಿದ್ದ ಆಕೆಗೆ ಈ ಮದುವೆ ಇಷ್ಟವಿರಲಿಲ್ಲ. ಆದರೆ ಪ್ರೀತಿಯ ಅಜ್ಜನ ಇಚ್ಛೆಯ ವಿರುದ್ಧ ನಡೆದುಕೊಳ್ಳುವ ಧೈರ್ಯವಿರಲಿಲ್ಲ. ತನ್ನ 14 ನೆಯ ವಯಸ್ಸಿನಲ್ಲಿಯೇ ಭೋಜರಾಜನೊಂದಿಗೆ ಆಕೆಯ ಮದುವೆ ನಡೆದೇ ಹೋಯಿತು. ಸದ್‌ಗೃಹಿಣಿಯಾಗಿ ತನ್ನ ಕರ್ತವ್ಯಗಳನ್ನು ನಿರ್ವಂಚನೆಯಿಂದ ನಿರ್ವಹಿಸುತ್ತಿದ್ದ ಮೀರಾ ಶ್ರೀಕೃಷ್ಣ ದೇವಾಲಯಕ್ಕೆ ಹೋಗಿ ಸಂಗೀತ ಮತ್ತು ನೃತ್ಯಸೇವೆಯನ್ನು ಮಾಡುತ್ತಿದ್ದಳು. ಗಂಡ ಅವಳ ದೈವಭಕ್ತಿಗೆ ಮಾರುಹೋಗಿದ್ದರೂ ಅವಳ ಅತ್ತೆಗೆ ಇಷ್ಟವಾಗುತ್ತಿರಲಿಲ್ಲ. ಅವಳ ಚಾರಿತ್ರ್ಯದ ಬಗ್ಗೆ ಹಗುರವಾಗಿ ಮಾತನಾಡಿ ತನ್ನ ಮಗನ ಮನಸ್ಸು ಕಲುಷಿತಗೊಳ್ಳುವಂತೆ ಮಾಡಿದಳು. ದುರದೃಷ್ಟವಶಾತ್ ಮಗ ಯಾವುದೋ ಯುದ್ಧದಲ್ಲಿ ಮಡಿದು ಹೋದ ಮೇಲೆ ಆಗಿನ ಕಾಲದಲ್ಲಿದ್ದ ಸತಿಪದ್ಧತಿಗನುಗುಣವಾಗಿ ಚಿತೆಯನ್ನೇರಲು ಸೊಸೆಯನ್ನು ಒತ್ತಾಯಪಡಿಸಿದಳು. ತನ್ನ ಪತಿ ಗಿರಿಧರ ಗೋಪಾಲನಾದ್ದರಿಂದ ತಾನು ನಿತ್ಯಸೌಭಾಗ್ಯವತಿಯೆಂದು ಮೀರಾ ಚಿತೆಯನ್ನೇರಲು ಒಪ್ಪಲಿಲ್ಲ. **(ಮೇರೇ ತೋ ಗಿರಧರ್ ಗೋಪಾಲ್ ದೂಸರೋ ನ ಕೋಈ... ಮೇರೋ ಪತಿ ಸೋಈ, ಗಿರ್‌ಧರ್ ಗಾಸ್ಯಾ ಸತೀ ನ ಹೋಸ್ಯಾ)** ನಂತರ ರಾಜಮನೆತನದವರು ಕೊಟ್ಟ ಕಿರುಕುಳವನ್ನು ತಾಳಲಾರದೆ ಮೀರಾ ಅರಮನೆಯನ್ನು ಬಿಟ್ಟು ಹೊರನಡೆದಳು.

ಆಕೆಯ ಹೃದಯ ಕೃಷ್ಣನಿಗಾಗಿ ಸದಾ ಹಂಬಲಿಸುತ್ತಿತ್ತು. ಕೃಷ್ಣನಲ್ಲಿ ಅನುರಕ್ತರಾದ ಗೋಪಿಯರಂತೆ ತಾನೂ ಒಬ್ಬ ಗೋಪಿಯೆಂದು ಆಕೆ ಪರಿಭಾವಿಸಿದ್ದಳು. ಅಕ್ಕಮಹಾದೇವಿಯು ಚೆನ್ನಮಲ್ಲಿಕಾರ್ಜುನನನ್ನು ತನ್ನ ಪತಿಯೆಂದು ಆರಾಧಿಸಿದ ದೇವರನ್ನೇ ಶ್ರೀಕೃಷ್ಣನ ರೂಪದಲ್ಲಿ ತನ್ನ ಪತಿಯೆಂದು ಆರಾಧಿಸಿದವಳು ಮೀರಾಬಾಯಿ. ಅಕ್ಕಮಹಾದೇವಿಯ ವಚನಗಳಲ್ಲಿರುವಂತೆ ಮೀರಾಳ ಪದ್ಯಗಳು ಅನುಭಾವದ ತೀವ್ರತೆಯಿಂದ ಕೂಡಿವೆ. 'ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವಂಗಾನೊಲಿದೆನವ್ವಾ' ಎಂದು ಅಕ್ಕ ಹೇಳಿದರೆ 'ಗಿರಧರ್ ಮ್ಹಾರೋ ಸಾಂಚೋ ಪ್ರೀತಮ್, ದೇಖತ್ ರೂಪ್ ಲುಭಾಊಂ' ಎನ್ನುತ್ತಾಳೆ ಮೀರಾ. 'ಈ ಸಾವ ಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು' ಎಂದು ಅಕ್ಕ ಹೇಳಿದರೆ 'ಮೀರಾ ಕೇ ಪ್ರಭು ಗಿರಿಧರ್ ನಾಗರ್, ದುರಜನ್ ಜಲೋ ಜಾ ಅಂಗೀಠೀ' ಎನ್ನುತ್ತಾಳೆ ಮೀರಾ. ಇಬ್ಬರೂ ಅರಮನೆಯಲ್ಲಿದ್ದೂ ಅರಸೊತ್ತಿಗೆಯ ವೈಭವಕ್ಕೆ ಸುಖಲೋಲುಪತೆಗೆ ಮಾರುಹೋಗದೆ ಕಠಿಣವಾದ ಸಾಧನೆಯಿಂದ ಅಧ್ಯಾತ್ಮಿಕ ಸಾಮ್ರಾಜ್ಯವನ್ನು ಸಂಪಾದಿಸಿದ ವೀರವೈರಾಗ್ಯ ವನಿತೆಯರು. ಇಬ್ಬರೂ ಲೋಕನಿಂದೆಗಳಿಗೆ ಗುರಿಯಾದರೂ ಲೆಕ್ಕಿಸದೆ ಸಮಾಧಾನಚಿತ್ತರಾಗಿ ಅಕ್ಕ ಚೆನ್ನಮಲ್ಲಿಕಾರ್ಜುನನನ್ನು ಅರಸಿ ಕದಳೀವನಕ್ಕೆ ಹೋದರೆ ಮೀರಾ ಶ್ರೀಕೃಷ್ಣನನ್ನು ಅರಸಿ ಬೃಂದಾವನಕ್ಕೆ ಹೋಗುತ್ತಾಳೆ.

ಬೃಂದಾವನದಲ್ಲಿ ಚೈತನ್ಯಮಹಾಪ್ರಭುಗಳ ಶಿಷ್ಯರಾಗಿದ್ದ ಜೀವಗೋಸ್ವಾಮಿಯವರ ದರ್ಶನ ಪಡೆಯಬೇಕೆಂಬ ಹಂಬಲದಿಂದ ಅವರಿದ್ದಲ್ಲಿಗೆ ಮೀರಾ ಹೋಗುತ್ತಾಳೆ. ಆದರೆ ದರ್ಶನಭಾಗ್ಯ ದೊರೆಯುವುದಿಲ್ಲ. ಕಾರಣ ಕೇಳಿದಾಗ ಗೋಸ್ವಾಮಿಯವರು ಸ್ತ್ರೀಯರ ಮುಖವನ್ನು ನೋಡುವುದಿಲ್ಲವೆಂಬ ವ್ರತವನ್ನು ಕೈಗೊಂಡಿರುವುದಾಗಿ ಸಂದೇಶವಾಹಕನಿಂದ ತಿಳಿದುಬರುತ್ತದೆ. ಕೂಡಲೇ ಮೀರಾ ಅದೇ ಸಂದೇಶವಾಹಕನ ಮೂಲಕ ಹೇಳಿಕಳುಹಿಸುತ್ತಾಳೆ: "ನಾನು ಇದುವರೆಗೂ ಬೃಂದಾವನದಲ್ಲಿ ಶ್ರೀಕೃಷ್ಣನೊಬ್ಬನೇ ಪುರುಷ, ಉಳಿದವರೆಲ್ಲಾ ಗೋಪಿಕಾ ಸ್ತ್ರೀಯರು ಎಂದು ತಿಳಿದುಕೊಂಡಿದ್ದೆ. ಈಗ ಶ್ರೀಕೃಷ್ಣನ ಇನ್ನೊಬ್ಬ ಪ್ರತಿಸ್ಪರ್ಧಿ ಪುರುಷ ಇಲ್ಲಿದ್ದಾನೆಂದು ತಿಳಿಯಿತು!" ಈ ಮಾತನ್ನು ಕೇಳಿದ ಜೀವಗೋಸ್ವಾಮಿ ಲಜ್ಜಿತರಾಗುತ್ತಾರೆ. ಸ್ವಾಭಿಮಾನವನ್ನು ಬಿಟ್ಟು ಬರಿಗಾಲಿನಲ್ಲಿ ಓಡೋಡಿ ಬಂದು ಸ್ವತಃ ಮೀರಾಳ ದರ್ಶನವನ್ನು ಪಡೆಯುತ್ತಾರೆ. ಈ ಘಟನೆ ಅನುಭವಮಂಟಪದಲ್ಲಿ 'ಕಾಯದ ಲಜ್ಜೆಯನ್ನು ಕಳೆದಿರುವೆಯಾದರೆ ಸೀರೆಯನಳಿದು ಕೂದಲಮರೆಯೇಕೆ' ಎಂಬ ಅಲ್ಲಮನ ಪ್ರಶ್ನೆಗೆ 'ಕಾಮನಮುದ್ರೆಯ ಕಂಡು ನಿಮಗೆ ನೋವಾದೀತೆಂದು ಮುಚ್ಚಿದೆ' ಎನ್ನುವ ಅಕ್ಕಮಹಾದೇವಿಯ ದಿಟ್ಟತನದ ಉತ್ತರವನ್ನು ಕೇಳಿ ಶೂನ್ಯಪೀಠದಿಂದಿಳಿದು ಬಂದು 'ಅಕ್ಕನ ಶ್ರೀಪಾದಕ್ಕೆ ನಮೋ ನಮೋ' ಎಂದ ಅಲ್ಲಮನ ನಡೆಯನ್ನು ನೆನಪಿಗೆ ತಂದುಕೊಡುತ್ತದೆ.

ಉತ್ತರಭಾರತದ ಮಧ್ಯಕಾಲೀನ ಭಕ್ತಿಸಾಹಿತ್ಯದಲ್ಲಿ ಮೀರಾ ರಚಿಸಿದ ಪದಗಳಿಗೆ ಒಂದು ವಿಶಿಷ್ಟ ಸ್ಥಾನವಿದೆ. ಅವು ವೃಂದಾವನದ ಸುತ್ತಮುತ್ತ ಪ್ರದೇಶಗಳಲ್ಲಿರುವ ಆಡುಮಾತಾದ ವ್ರಜಭಾಷೆಯಲ್ಲಿವೆ. ಕರ್ನಾಟಕ ಸಂಗೀತ ಕಛೇರಿಯ ಕೊನೆಯಲ್ಲಿ ಪುರಂದರದಾಸರ ದೇವರನಾಮಗಳನ್ನು ಹಾಡುವಂತೆ ಹಿಂದೂಸ್ತಾನೀ ಸಂಗೀತದ ಕೊನೆಯಲ್ಲಿ ಮೀರಾಳ ಪದಗಳನ್ನು ಹಾಡದಿದ್ದರೆ ಸಂಗೀತ ಕಛೇರಿ ಅಪೂರ್ಣವೆನಿಸುತ್ತದೆ. ಇತ್ತೀಚೆಗೆ ಕರ್ನಾಟಕಸಂಗೀತದಲ್ಲೂ 'ಮೀರಾಭಜನ್' ವಿಶೇಷಸ್ಥಾನವನ್ನು ಪಡೆದಿದೆ.

ಈ ಪ್ರಪಂಚದಲ್ಲಿ ಕೋಟ್ಯಂತರ ಜನರಿದ್ದಾರೆ. ಎಲ್ಲರೂ ಎಲ್ಲರನ್ನು ನೋಡುವುದು ಅಸಾಧ್ಯದ ಮಾತು. ಎಲ್ಲರ ಮುಖಭಾವ ನೂರಕ್ಕೆ ನೂರು ಒಂದೇ ತೆರನಾಗಿ ಇಲ್ಲವೆಂದು ಹೇಳಬಹುದಾದರೂ ಅವರ ಸ್ವಭಾವ ಮಾತ್ರ ಒಂದೇ ಎಂದು ಹೇಳಲು ಯಾರೂ ಹಿಂಜರಿಯಬೇಕಾಗಿಲ್ಲ. ಬಸವಣ್ಣನವರ ಮಾತುಗಳಲ್ಲಿ ಹೇಳುವುದಾದರೆ "ಆಸೆಯಾಮಿಷ ರೋಷ-ಹರುಷ-ವಿಷಯಾದಿಗಳೆಲ್ಲಾ ಒಂದೇ!" ಸ್ವಾರ್ಥ, ದ್ವೇಷ, ದುರಾಸೆ, ಕುಟಿಲತನ, ಕ್ರೌರ್ಯ, ಅಧಿಕಾರ ಲಾಲಸೆ, ವಿಷಯಲಂಪಟತನ ಇತ್ಯಾದಿಗಳಲ್ಲಿ ಒಬ್ಬರನ್ನೊಬ್ಬರು ಮೀರಿಸುವವರೇ. ಸಾಮಾನ್ಯ ಜನರ ಜೀವನ ಮರದಿಂದ ಬೀಳುವ ಹಣ್ಣೆಲೆಯಂತೆ! ತರಗೆಲೆಯು ಗೊತ್ತು ಗುರಿಯಿಲ್ಲದೆ ಎಲ್ಲಿಯೋ ಹೋಗಿ ಬೀಳುತ್ತದೆ. ಕಾಲಕಸವಾಗುತ್ತದೆ. ಇದು ಲೌಕಿಕ ಜೀವನದಲ್ಲಿ ಮೈಮರೆತವರ ವಿಚಾರವಾದರೆ ಅಧ್ಯಾತ್ಮಿಕ ಮಾರ್ಗದಲ್ಲಿ ದೃಢವಾದ ಹೆಜ್ಜೆಗಳನ್ನಿಟ್ಟು ಅನುಭಾವದ ಶಿಖರದ ತುಟ್ಟತುದಿಯನ್ನೇರಿದ ಅನುಭಾವಿಗಳ ವಿಚಾರವೇ ಬೇರೆ. ವಿಭಿನ್ನ ಕಾಲಮಾನಗಳಲ್ಲಿ, ವಿಭಿನ್ನ ಪ್ರಾಂತ್ಯ-ಪ್ರದೇಶಗಳಲ್ಲಿ ಇದ್ದರೂ, ವಿಭಿನ್ನಭಾಷೆಯವರಾಗಿದ್ದರೂ ಅನುಭಾವಿಗಳ ನಡೆ ಮತ್ತು ನುಡಿ ವಿಶಿಷ್ಟ ರೀತಿಯಿಂದ ಕೂಡಿ ಒಂದಾಗಿ ಕಾಣುವುದು ಅತ್ಯಂತ ವಿಸ್ಮಯಕಾರಿಯಾದರೂ ವಾಸ್ತವ ಸಂಗತಿ. ಅವರ ಜೀವನ ಶೃತಿಗೊಂಡ ವೀಣೆ. ಒಂದಲ್ಲ, ನೂರಾರು. ಆದರೂ ಸ್ವರಮಾತ್ರ ಒಂದೇ. ಅವರ ನುಡಿ ಮಾಮರವನೇರಿ ಸ್ವರಗೈವ ಕೋಗಿಲೆಯ ಇಂಪಾದ ದನಿ. ಅವರ ನಡೆ ಆಗಸದಲ್ಲಿ ಹಾರಾಡುವ ಬೆಳಕ್ಕಿಗಳ ಸಾಲಿನಂತೆ ಸ್ವಚ್ಛಂದ ಹಾಗೂ ಶುಭ್ರ. ಅವರು 'ಲೋಕದ ಇಚ್ಛೆಯಂತೆ ನುಡಿಯರು, ಲೋಕದ ಇಚ್ಛೆಯಂತೆ ನಡೆಯರು!' ಅವರ ವರ್ತನೆ ನೋಡುಗರ ಕಣ್ಮನ ತಣಿಸಲು, ವೈಜ್ಞಾನಿಕ ಸಾಧನೆಯನ್ನು ಪ್ರದರ್ಶಿಸಲು ಮೊನ್ನೆ ಮೊನ್ನೆ ಬೆಂಗಳೂರಿನ ಎಲಹಂಕದಲ್ಲಿ ಗಗನಕ್ಕೆ ಹಾರಿದ ಲೋಹದ ಹಕ್ಕಿಗಳಂತಲ್ಲ. ಅವರದು ಲೌಕಿಕ ಜೀವನದ ಸೆಳೆತಗಳಿಂದ ಮೇಲೇರಿ ದಿಕ್-ಕಾಲಾತೀತವಾದ, ನಿತ್ಯನಿರತಿಶಯವಾದ ಸತ್ಯದ ಅನ್ವೇಷಣೆಯಲ್ಲಿ ದಿಗ್‌ದಿಗಂತಗಳಿಗೆ ಹಾರಿದ ಆನಂದಾನುಭೂತಿಯ ನಿರಂತರ ಪಯಣ! ಅವರ ಜೀವನವು

ಸುಗಂಧ ಸೂಸುವ ಸುಂದರ ಹೂಗಳಂತೆ! ಯಾವ ಹೂವೂ ನೋಡುಗರ ನೋಟವನ್ನು ಸೆಳೆಯಲು ಅರಳುವುದಿಲ್ಲ. ಯಾರು ನೋಡಲಿ ಬಿಡಲಿ, ಅರಳುವುದು ಅದರ ಸಹಜ ಗುಣ. ಗುಲಾಬಿ ಹೂವನ್ನು ನೀವು ಯಾವ ಹೆಸರಿನಿಂದಲಾದರೂ ಕರೆಯಿರಿ; ಅದು ತನ್ನ ಸುಗಂಧ ಬೀರುವುದನ್ನು ಬಿಡುವುದಿಲ್ಲ ಎನ್ನುತ್ತಾನೆ ಷೇಕ್ಸ್‌ಪಿಯರ್ (Call a rose by any name, it smells as good!). “ಎಲ್ಲ ಕೇಳಲಿ ಎಂದು ನಾನು ಹಾಡುವುದಿಲ್ಲ.... ಆರು ಕಿವಿ ಮುಚ್ಚಿದರೂ ನನಗಿಲ್ಲ ಚಿಂತೆ!” ಎನ್ನುತ್ತಾರೆ ರಾಷ್ಟ್ರಕವಿ ಜಿ.ಎಸ್.ಎಸ್.

ಈ ವಾರದ ಅಂಕಣದಲ್ಲಿ ಅಕ್ಕ ಮತ್ತು ಮೀರಾ ಕುರಿತು ಬರೆಯಲು ಒಂದು ವಿಶೇಷ ಕಾರಣವಿದೆ. ಬೆಂಗಳೂರಿನ ಅರಮನೆಯ ಆವರಣದಲ್ಲಿ ಇತ್ತೀಚೆಗೆ ನಡೆದ ನಮ್ಮ ಮಠದ ‘ತರಳಬಾಳು ಹುಣ್ಣಿಮೆ ಮಹೋತ್ಸವ’ ಮುಕ್ತಾಯಗೊಂಡ ಮಾರನೆಯ ದಿನವೇ ರಾಜಾಸ್ತಾನದ ರಾಜಧಾನಿ ಜೈಪುರದ ಅರಮನೆಯ ಆವರಣದಲ್ಲಿ ಏರ್ಪಡಿಸಿರುವ ‘ಆನಂದ ಮಹೋತ್ಸವ’ದಲ್ಲಿ ಪಾಲ್ಗೊಳ್ಳಲು ಬರಬೇಕಾಯಿತು. ಒಂದು ತಿಂಗಳ ಕಾಲ ಇಲ್ಲಿ ನಡೆಯುತ್ತಿರುವ ಮಹೋತ್ಸವದ ಕೇಂದ್ರಬಿಂದು ಚೈತನ್ಯ ಸಂಪ್ರದಾಯಕ್ಕೆ ಸೇರಿದ ಶ್ರೀಗೋವಿಂದದೇವರ ಮಂದಿರ. ವೃಂದಾವನದಲ್ಲಿ ಹಾಳುಬಿದ್ದಿದ್ದ ಈ ವಿಗ್ರಹ ಜೀವಗೋಸ್ವಾಮಿಯವರ ಕಣ್ಣಿಗೆ ಬಿದ್ದು ನಂತರ ಮಹಾರಾಜ ಸವಾಯೀ ಜಯಸಿಂಹನ ಕಾಲದಲ್ಲಿ ಕ್ರಿ.ಶ. 1727 ರಲ್ಲಿ ಜೈಪುರದಲ್ಲಿ ಪ್ರತಿಷ್ಠಾಪನೆಗೊಂಡಿತು. ಅಂದಿನಿಂದ ಮಹಾರಾಜ ಸವಾಯೀ ಜಯಸಿಂಹನು “ಮೈಂ ಆಜ್ ಸೇ ಮಹರಾಜಾ ನಹೀಂ ಹೂಂ, ದಿವಾನ್ ಹೂಂ” ಎಂದು ಹೇಳಿ ಗೋವಿಂದದೇವರ ಹೆಸರಿನಲ್ಲಿಯೇ ತನ್ನ ಆಳ್ವಿಕೆಯನ್ನು ನಡೆಸುತ್ತಾನೆ. ಇಲ್ಲಿಯ ಜನರಿಗೆ ಶ್ರೀಗೋವಿಂದದೇವರ ಮೇಲೆ ಅಪಾರವಾದ ಭಕ್ತಿ. 15 ವರ್ಷಗಳ ಹಿಂದೆ ಇದೇ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಬಂದಾಗ ನೋಡಿದ ದೃಶ್ಯ ನಿನ್ನೆ ಮೊನ್ನೆ ನೋಡಿದಂತಿದೆ. ವೃದ್ಧ ಮಹಿಳೆಯೊಬ್ಬಳು ಶಿರಬಾಗಿ ಗೋವಿಂದದೇವರ ಗರ್ಭಗುಡಿಯ ಮುಂಭಾಗದಲ್ಲಿದ್ದ ಹೊಸ್ತಿಲನ್ನು ಕೈಯಲ್ಲಿ ಒತ್ತುತ್ತಿದ್ದಳು. ಆದರೆ ಆಕೆಯ ಹೃದಯದಲ್ಲಿದ್ದ ಭಾವನೆಗಳೇ ಬೇರೆ. ಆಕೆ ಒತ್ತುತ್ತಿದ್ದುದು ಗುಡಿಯ ಹೊಸ್ತಿಲನ್ನಲ್ಲ, ಶ್ರೀಗೋವಿಂದದೇವರ ಪಾದಗಳನ್ನು! ಅದುವೇ ವಾತ್ಸಲ್ಯಭಕ್ತಿ!

ಮಂದಿರದ ಆವರಣದಲ್ಲಿ ಸೇರಿದ್ದ ಸಂತಸಮ್ಮೇಳನದಲ್ಲಿ ಅಕ್ಕಮಹಾದೇವಿಯ ಜೀವನವೃತ್ತಾಂತವನ್ನು ಮತ್ತು ಆಕೆಯ ವಚನಗಳನ್ನು ವಿವರಿಸಿ ಹೇಳಿದಾಗ ಉಡುತಡಿಯ ಅಕ್ಕ ಅಂದು ಕಲ್ಯಾಣದ ಅನುಭವಮಂಟಪದಲ್ಲಿ ‘ಅಕ್ಕ’ ಎನಿಸಿಕೊಂಡಂತೆ ಜೈಪುರದ ಶ್ರೀಗೋವಿಂದದೇವನ ಭಕ್ತರ ಬಾಯಲ್ಲಿ ಮತ್ತೊಮ್ಮೆ ಮೀರಾಳ ‘ಅಕ್ಕ’ ಎನಿಸಿಕೊಂಡಿದ್ದಳು! ಇಬ್ಬರೂ ಒಬ್ಬನನ್ನೇ ಪ್ರೀತಿಸಿದ ಸೋದರಿಯರು (ಸಗೀ ಬಹಿನೆಂ) ಆಗಿದ್ದರು!

24.2.2011

ಶ್ರೀ ತರಳಬಾಳು ಜಗದ್ಗುರು
ಡಾ॥ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ